ಅ) ಸಾರಾಯಿಯನ್ನು ಬಾಟ್ಲಿಂಗ್ ಮುಖಾಂತರ ಮಾರಾಟ ಮಾಡುವ ವ್ಯವಸ್ಥೆ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಖಾಸಗಿಯವರಿಗೂ ಸಹ ಅನುಮತಿ ನೀಡಲಾಗುವುದೇ?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) ರಾಜ್ಯದಲ್ಲಿ 1998-99ನೇ ಸಾಲಿಗೆ ಈ ಕೆಳಗಿನಂತೆ ಮದ್ಯದಂಗಡಿ ಸನ್ನದುಗಳನ್ನು ನೀಡಲಾಗಿದೆ.

ಸಿಎಲ್ - 1	(ಸಗಟು)	-	339
ಸಿಎಲ್ - 2	(ಟಿಲ್ಲರಿ)	-	3797
ಸಿಎಲ್ - 1	(ಕ್ಲಬ್‌ಗಳು)	-	137
ಸಿಎಲ್ - 7	(ಹೋಟೇಲ್ ಮತ್ತು	-	339
	ಬೋರ್ಡಿಂಗ್ ಹೌಸ್)	-	115
ಸಿಎಲ್ - 8	(ಮಿಲಿಟರಿ ಕ್ಯಾಂಟೀನ್)	-	48
ಸಿಎಲ್ - 9	(ಬಾರ್‌ಗಳು)	-	3348

ಮೇಲ್ಕಂಡ ಸನ್ನದು ಪೈಕಿ 1998-99ನೇ ಸಾಲಿನಲ್ಲಿ ನೀಡಲಾದ ಹೊಸ ಸನ್ನದುಗಳ ಸಂಖ್ಯೆ ಎಂದರೆ ಸಿಎಲ್ - 1=1, ಸಿಎಲ್ - 2=1, ಸಿಎಲ್ - 4=3, ಸಿಎಲ್ - 7=13 ಮತ್ತು ಸಿಎಲ್ - 9=53. ಉಳಿದವು 1998-99ಕ್ಕೆ ಮುಂಚೆ ಇದ್ದ ಸನ್ನದುಗಳು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಮುಧೋಳದಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಕೆಯಲ್ಲಿ ವಿಳಂಬ.

964 (1360) ಶ್ರೀ ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮುಧೋಳ ಸ್ಟೇಷನ್‌ಗೆ 20 ಎಂ.ವಿ.ಎ. ಟ್ರಾನ್ಸ್‌ಫಾರ್ಮರ್ ಪೂರೈಕೆಯಾಗಿದ್ದರೂ ಸಹ ಅದನ್ನು ಅಳವಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದಲ್ಲಿ ಅದಕ್ಕೆ ಕಾರಣವೇನು ಹಾಗೂ ಎಂದು ಅಳವಡಿಸಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಹೌದು

ಆ) ಮುಧೋಳ ಸ್ಟೇಷನ್ನಿನಲ್ಲಿ 110 : 11 ಕೆ.ವಿ. 10 ಎಂ.ವಿ.ಎ. ಸಾಮರ್ಥ್ಯದ ಎರಡು ಪರಿವರ್ತಕಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಪೈಕಿ ಒಂದು 10 ಎಂ.ವಿ.ಎ ಸಾಮರ್ಥ್ಯದ ಪರಿವರ್ತಕವನ್ನು 20 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕದ ಮೂಲಕ ಬದಲಾಯಿಸಲಾಗುತ್ತಿದೆ. 20 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕವನ್ನು ಈಗಾಗಲೇ ಒದಗಿಸಿದ್ದು, ಅದರ ಜೋಡಣೆಯ ಕಾರ್ಯವೂ ಸಹಾ ಮುಗಿದಿದೆ. ಈ ಕಾರ್ಯಕ್ಕೆ ಬೇಕಾಗಿರುವ ಕೆಲವು ಸಾಮಗ್ರಿಗಳನ್ನು ಮುಖ್ಯವಾಗಿ 110 ಕೆ.ವಿ. ಸರ್ಕ್ಯೂಟ್ ಬ್ರೇಕರ್, 110 ಕೆ.ವಿ. ಕರೆಂಟ್ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 11 ಕೆ.ವಿ. ಸ್ವಿಚ್‌ಗೇರ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಪರಿವರ್ತಕವನ್ನು ಅಳವಡಿಸಿ ಮತ್ತು ಚಾಲನೆಗೊಳಿಸಲು ದೀರ್ಘ ಅವಧಿಯವರೆಗೆ ವಿದ್ಯುತ್ ಸ್ಥಗಿತ (ಲೈನ್ ಕ್ಲಿಯರ್) ಗೊಳಿಸಬೇಕಾಗಿರುತ್ತದೆ. ಬೇಸಿಗೆಯ ಕಾಲ ಪ್ರಾರಂಭವಾಗಿದ್ದು, ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಯು ಅತ್ಯಂತ ಜಾಸ್ತಿಯಾಗಿದ್ದು, ಈಗ ವಿದ್ಯುತ್ ಸ್ಥಗಿತಗೊಳಿಸುವುದು ಕಷ್ಟಕರವಾಗುತ್ತದೆ. ಏಪ್ರಿಲ್-99ರ ಮಧ್ಯಭಾಗದ ನಂತರ ನೀರಾವರಿ ಪಂಪುಸೆಟ್ಟುಗಳ ಬಳಕೆಯು ಕಡಿಮೆಗೊಳ್ಳುವುದರಿಂದ, ಆ ವೇಳೆಯಲ್ಲಿ ವಿದ್ಯುತ್ ಸ್ಥಗಿತಪಡಿಸಿ (ಲೈನ್ ಕ್ಲಿಯರ್) ಪರಿವರ್ತಕದ ಚಾಲನೆಯ ಕೆಲಸವನ್ನು ಚುರುಕುಗೊಳಿಸಲಾಗುವುದು.

ಕಾವೇರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿ.

966 (1448) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :— ಮಾನ್ಯ ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಾವೇರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿರುವ ಪ್ರದೇಶಗಳು ಯಾವುವು? ಸಂತೇಮಾರನಹಳ್ಳಿ ಕ್ಷೇತ್ರದ ಯಾವ ಪ್ರದೇಶ ಈ ಅಚ್ಚುಕಟ್ಟಿಗೆ ಸೇರಿದೆ ಕ್ಷೇತ್ರದ ವ್ಯಾಪ್ತಿಗೆ ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಹಣ ಮಂಜೂರಾಗಿದೆ. (ವಿವರ ಒದಗಿಸುವುದು)

ಆ) ಮಲೆನಾಡು ಅಭಿವೃದ್ಧಿ ಯೋಜನೆ ಅಡಿ ಚಾಮರಾಜನಗರ ತಾಲ್ಲೂಕು ಮತ್ತು ಸಂತೇಮಾರನಹಳ್ಳಿ ಕ್ಷೇತ್ರದ ಅಭಿವೃದ್ಧಿ ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಹಣ ಮಂಜೂರಾಗಿದೆ (ವಿವರ ನೀಡುವುದು).

ಇ) ಚಾಮರಾಜನಗರ ತಾಲ್ಲೂಕು ಸುವರ್ಣಾವತಿ ಮತ್ತು ಚಿಕ್ಕಹೊಳೆ ಅಣೆಕಟ್ಟುಗಳು, ಕಾವೇರಿ ಜಲಾನಯನ ವ್ಯಾಪ್ತಿಗೆ ಒಳಪಡುತ್ತವೆಯೇ ಇಲ್ಲದಿದ್ದಲ್ಲಿ ಒಳಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು).